ನೋಡುವ ನೋಟದಲ್ಲಿ ಆಗಬೇಕೇ ಹೊರತು ಹೆಸರಲ್ಲಲ್ಲ ಎಂಬುದು ಅವರ ವಾದ.

ಬ್ಯಾಪಾರಿ ತಮ್ಮ ಹುಟ್ಟಿನ ಸಂದರ್ಭವನ್ನು ವಿವರಿಸುವುದರೊಂದಿಗೆ ಕಥನ ಆರಂಭವಾಗುತ್ತದೆ; ಅದೊಂದು ಅಳಲಿನ ಪ್ರಸಂಗ. ನವಜಾತ ಮಗುವಿನ ಬಾಯಿಗೆ ತಂದೆಯಾದವನು ಒಂದು ಹನಿ ಜೇನನ್ನು ಸವರಿದರೆ, ಇಡೀ ಜೀವನ ಸಿಹಿಯಾಗಿರುತ್ತದೆ ಎಂಬುದು ಹಿರಿಯರ ನಂಬಿಕೆ. ಆದರೆ, ಕುಟುಂಬ ನಿರ್ವಹಣೆಗೆ ಒಂದು ಹಿಡಿ ಅಕ್ಕಿ ತರುವುದಕ್ಕೂ ಪ್ರಯಾಸಪಡುತ್ತಿದ್ದ ತಂದೆಗೆ ಅದು ಸಾಧ್ಯವಾಗುವುದಿಲ್ಲ. ಬ್ಯಾಪಾರಿಯವರ ಯಾತನೆಯ ನುಡಿಯಿದು: 'ನನಗಾವ ಜೇನೂ ಸಿಗಲಿಲ್ಲ. ಜೀವನದಲ್ಲಿ ಯಾವುದೇ ಸಿಹಿಯನ್ನು ಕಾಣದ ನಾನು, ದುರದೃಷ್ಟಶಾಲಿ ತಂದೆಯ ನತದೃಷ್ಟ ಮಗ'.

ಭಾರತದ ವಿಭಜನೆಯ ಬಳಿಕ ಹಲವಾರು ನಿರ್ಗತಿಕರಾಗಿ ಭಾರತಕ್ಕೆ ವಲಸೆ ಬಂದವರಲ್ಲಿ ಬ್ಯಾಪಾರಿಯವರ ಕುಟುಂಬವೂ ಒಂದು. ಆಗ ಬ್ಯಾಪಾರಿ ಮೂರು ವರ್ಷದ ಬಾಲಕ. ಎಲ್ಲರೂ ಬಂದು ನೆಲೆಗೊಂಡದ್ದು ಪಶ್ಚಿಮ ಬಂಗಾಳದ ಬಂಕುರ ಜಿಲ್ಲೆ ಶಿರೋಮಣಿಪುರದ ನಿರಾಶ್ರಿತ ಶಿಬಿರದಲ್ಲಿ (1953-54). ಅದು ಉರಿಬಿಸಿಲಿನ ಕ್ಷಾಮಪೀಡಿತ ಪ್ರದೇಶ. ನೀರಿಗೆ ಹಾಹಾಕಾರ. ಶೌಚಾಲಯಗಳಿಲ್ಲದೆ ಜನರು ಹತ್ತಿರದ ಬಯಲನ್ನೇ ಆಶ್ರಯಿಸಬೇಕಿತ್ತು. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಸೈನಿಕರಿಗಾಗಿ ಸಂಗ್ರಹಿಸಿಟ್ಟಿದ್ದ ಮುಗ್ಗಲು ಹಿಡಿದ ಅಕ್ಕಿ ಸರ್ಕಾರದ ವತಿಯಿಂದ ತಿಂಗಳಿಗೆ ಎರಡು ಬಾರಿ ಸಿಗುತ್ತಿತ್ತು. ಅಕ್ಕಿಯನ್ನು ಬೇಯಿಸುತ್ತಿದ್ದರೆ ಇಡೀ ಶಿಬಿರದಲ್ಲಿ ಕೊಳಕು ವಾಸನೆ; ಅನ್ನವನ್ನು ತಿಂದವರಿಗೆ ಅಜೀರ್ಣ. ಪೂರ್ವ ಬಂಗಾಳದ ತಂಪು ಹವೆಯನ್ನು ಅನುಭವಿಸಿ ಬಂದವರಿಗೆ, ಅಲ್ಲಿನ ತಾಪಮಾನವನ್ನು ಸಹಿಸಲಾಗುತ್ತಿರಲಿಲ್ಲ. ಧಗೆ ತಡೆಯಲಾರದೆ ಜನ ಸಾಯುತ್ತಿದ್ದರು. ಶಿಬಿರದಲ್ಲಿ ವೈದ್ಯನೊಬ್ಬ ಇದ್ದರೂ ಜೀವ ಉಳಿಸುವ ಔಷಧಿಗಳಿರಲಿಲ್ಲ. 'ಕೆಲವು ಸಂದರ್ಭಗಳಲ್ಲಂತೂ ಸಾವಿನ ಮೆರವಣಿಗೆಯೇ ಸಾಗಿದಂತಾಗುತ್ತಿತ್ತು. ಒಂದು ಹೆಣವನ್ನು ಸುಟ್ಟು ಬರುತ್ತಿದ್ದಂತೆ ಮತ್ತೊಂದಕ್ಕೆ ತಯಾರಾಗಬೇಕಾಗಿತ್ತು. ಸುಮಾರು ಒಂದು ಮೈಲು ದೂರದಲ್ಲಿ ಒಣಗಿದ ಕೆರೆಯೊಂದಿತ್ತು. ಹೆಣವನ್ನು ಸುಡುತ್ತಿದ್ದುದು ಅಲ್ಲಿಯೇ. ಆ ಜಾಗದಲ್ಲಿ ರಾತ್ರಿ-ಹಗಲು ಬೆಂಕಿಯ ಜ್ವಾಲೆ ನೋಡಬಹುದಿತ್ತು. ಹೊಗೆಯಿಂದ ಆಕಾಶವೆಲ್ಲಾ ಕಪ್ಪಾಗುತ್ತಿತ್ತು. ಹೆಚ್ಚಾಗಿ ಸಾಯುತ್ತಿದ್ದವರು ವಯಸ್ಸಾದವರು ಹಾಗೂ ಮಕ್ಕಳು. ದೊಡ್ಡವರನ್ನು ಸುಡುತ್ತಿದ್ದರು, ಮಕ್ಕಳನ್ನು ಹುಗಿಯುತ್ತಿದ್ದರು' ಎಂದು ಬ್ಯಾಪಾರಿ ನೆನಪಿಸಿಕೊಂಡಿದ್ದಾರೆ.

ಶಿಬಿರದಲ್ಲಿ ಮೇಲ್ಜಾತಿಯವರು ನಾಮಶೂದ್ರರು, ಮೂಚಿಗಳು, ಜೇಲೆಗಳಂತಹ ಕೆಳಜಾತಿಯವರೊಂದಿಗೆ ಬೆರೆಯುತ್ತಿರಲಿಲ್ಲ. ಅವರಿಗೆ ಅಧಿಕಾರಿಗಳ ಹಾಗೂ ರಾಜಕಾರಣಿಗಳ ಸಹಾಯದಿಂದ ಪ್ರತ್ಯೇಕ ಜಾಗ ದೊರೆಯುತ್ತಿತ್ತು.

ದೇಶದ ಆರ್ಥಿಕ ಸಂಕಷ್ಟದಿಂದಾಗಿ ಶಿಬಿರದಲ್ಲಿರುವ ಜನರಿಗೆ ಆಹಾರ ಮತ್ತು ಹಣ ಸರಬರಾಜು ಮಾಡುವ ಜವಾಬ್ದಾರಿಯಿಂದ ಸರ್ಕಾರ ಹಿಂದೆ ಸರಿಯುತ್ತದೆ. ಎಲ್ಲರನ್ನೂ ದಂಡಕಾರಣ್ಯ ಪುನರ್ವಸತಿ ಯೋಜನೆಯಡಿಯಲ್ಲಿ ಸ್ಥಳಾಂತರಿಸಲು ಮುಂದಾಗುತ್ತಾರೆ; ಇದು ಒಂದು ಬಗೆಯ ಗಡಿಪಾರು. ಇದನ್ನು ವಿರೋಧಿಸಿ ಕಮ್ಯುನಿಸ್ಟ್ ಪಕ್ಷದ ನಾಯಕರ ಪ್ರಚೋದನೆಯಿಂದಾಗಿ ಸಾವಿರಾರು ಮಂದಿ ಮೊದಲ ಹಂತದ ಉಪವಾಸ ಸತ್ಯಾಗ್ರಹ ಆರಂಭಿಸಿ, ಹೋರಾಟ ತೀವ್ರಗೊಳಿಸಬೇಕೆಂದು ಬಿಶಾಮ್‌ಪುರ ನ್ಯಾಯಾಲಯದ ಆವರಣಕ್ಕೆ ಜಾಥಾ ಹೋಗಬೇಕೆಂದು ತೀರ್ಮಾನಿಸುತ್ತಾರೆ. ಆ ಪ್ರತಿಭಟನೆಯನ್ನು ಹತ್ತಿಕ್ಕಲು ಪೊಲೀಸರು ಹೊಸ ಉಪಾಯವನ್ನು ಮಾಡಿದ್ದರು. ಅವರನ್ನು ಬಂಧಿಸಿ ಜೈಲಿಗೆ ಹಾಕುವ ಬದಲು 'ಪ್ರತಿಭಟನಾಕಾರರನ್ನು ವ್ಯಾನಿನಲ್ಲಿ ತುಂಬಿಸಿಕೊಂಡು ಸುಮಾರು ಇಪ್ಪತ್ತು ಇಪ್ಪತ್ತೈದು ಮೈಲಿ ದೂರ ಕರೆದೊಯ್ದು ಅಲ್ಲಿ ಬಿಟ್ಟು ಬಂದುಬಿಡುವುದು. ಅವರೆಲ್ಲಾ ನಡೆದೇ ವಾಪಸ್ಸು ಬರಬೇಕಿತ್ತು. ಹಸಿವಿನಿಂದ ಸುಸ್ತಾಗಿ ಬಿಡುತ್ತಿದ್ದರು'.

1950ರ ವೇಳೆಗೆ ಬಂಗಾಲದಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿ, ದಂಡಕಾರಣ್ಯಕ್ಕೆ ಹೋಗಲು ತಯಾರಿಲ್ಲದವರಿಗೆ ರೇಷನ್ ನಿಲ್ಲಿಸಲಾಗಿತ್ತು. ನಿರಾಶ್ರಿತರಿದ್ದ ಜಾಗಗಳನ್ನು ಮೇಲ್ಜಾತಿಯವರು ಅಕ್ರಮಿಸಿಕೊಂಡು ಕೆಳಜಾತಿಯವರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದರು. ಬ್ಯಾಪಾರಿಯ ತಂದೆ ಜಾಧವಪುರದಲ್ಲಿ ದಿನಗೂಲಿ ನೌಕರನಾಗಿ